RNU AIR DHARWAD

# DECEMBER 16, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- ಬೆಳಗಾವಿ ಚಳಿಗಾಲದ ಅಧಿವೇಶನ: ಉಭಯ ಸದನಗಳಲ್ಲಿ, ಇಂದಿನಿಂದ ಮೂರು ದಿನ, ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ, ಚರ್ಚೆ.
- ರಾಜ್ಯದಲ್ಲಿ ಮಾನವ ಮತ್ತು ವನ್ಯಜೀವಿ ಸಂಘರ್ಷಕ್ಕೆ, ಪರಿಹಾರ ಕಂಡುಕೊಳ್ಳಲು, ಅರಣ್ಯ ಇಲಾಖೆ, ಆದ್ಯತೆ.
- ನ್ಯಾಯ ತೀರ್ಪುಗಳು, ವಿವಾದ ರಹಿತ ಮತ್ತು ಸರ್ವ ಸಮ್ಮತವಾಗಿರಬೇಕು – ಆರ್.ವೆಂಕಟರಮಣಿ.
- ಬಳ್ಳಾರಿಯ, ಸಂಗನಕಲ್ಲು ಪ್ರಾಗ್ ಐತಿಹಾಸಿಕ ಬೆಟ್ಟದ, ಐದು ಸಾವಿರ ವರ್ಷಗಳ ಬೂದಿ ಗುಡ್ಡ ಉಳಿಸಲು, ತಜ್ಞರ ಮನವಿ.

<><><>

**ಈಗ ವಾರ್ತೆಗಳ ವಿವರ**

<><><>

ಉತ್ತರ ಕರ್ನಾಟಕದ ಸಮಸ್ಯೆಗಳನ್ನು, ಕಾಲಮಿತಿಯಲ್ಲಿ ಪರಿಹರಿಸಲು, ಇಂದಿನಿಂದ ಮೂರು ದಿನಗಳ ಕಾಲ, ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ಚರ್ಚಿಸಲಾಗುವುದು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಗದಗ ಜಿಲ್ಲೆ ರೋಣದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಿಲಾನ್ಯಾಸ ನೆರವೇರಿಸಿ, ಅವರು ಮಾತನಾಡಿದರು. ಇಂದಿನಿಂದ ಉಭಯ ಸದನಗಳಲ್ಲಿ, ಉತ್ತರ ಕರ್ನಾಟಕದ ಸಮಸ್ಯೆಗಳನ್ನು ಪರಿಹರಿಸುವ ಕುರಿತು, ಮೂರು ದಿನಗಳ ಕಾಲ ನಡೆಯುವ ಚರ್ಚೆಗೆ, ಸರ್ಕಾರ ಉತ್ತರಿಸಲಿದೆ. ಆಡಳಿತಾತ್ಮಕ ದೃಷ್ಟಿಯಿಂದ, ಬೆಳಗಾವಿ–ಚಿಕ್ಕೋಡಿ ಎರಡು ಜಿಲ್ಲೆಗಳನ್ನಾಗಿ ವಿಭಜಿಸುವ ಸಂಬಂಧ, ಜನಪ್ರತಿನಿಧಿಗಳ ಸಭೆ ಕರೆದು, ತೀರ್ಮಾನಿಸುವುದಾಗಿ, ಸಿದ್ದರಾಮಯ್ಯ ತಿಳಿಸಿದರು.

<><><>

ಕಳಸಾ–ಬಂಡೂರಿ ನಾಲೆಗಳ ಜೋಡಣೆಯ, ಮಹದಾಯಿ ಯೋಜನೆ ಅನುಷ್ಠಾನಗೊಳಿಸಲು, ಕೇಂದ್ರದ ಅರಣ್ಯ ಮತ್ತು ಪರಿಸರ ಖಾತೆ ಸಚಿವರನ್ನು ಹಾಗೂ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರನ್ನು ಭೇಟಿ ಮಾಡಿ, ಚರ್ಚಿಸಿದ್ದಾಗಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಮಹದಾಯಿ ನದಿ

ಯೋಜನೆ ಅನುಷ್ಠಾನಕ್ಕೆ, ಕೇಂದ್ರದ ಅನುಮತಿಗಾಗಿ ಕಾಯುತ್ತಿದ್ದು, ಅರಣ್ಯ ಮತ್ತು ಪರಿಸರ ಇಲಾಖೆಯಿಂದ ಅನುಮತಿ ಕೊಡಿಸಲು, ಪ್ರಲ್ಹಾದ ಜೋಶಿ ಹಾಗೂ ಜಗದೀಶ ಶೆಟ್ಟರ ಮುತುವರ್ಜಿ ವಹಿಸಬೇಕು ಎಂದರು.

<><><>

ರಾಜ್ಯದಲ್ಲಿ ಮಾನವ ಮತ್ತು ವನ್ಯಜೀವಿ ಮಧ್ಯದ ಸಂಘ ’ದ ಸಮಸ್ಯೆಗೆ, ಪರಿಹಾರ ಕಂಡುಕೊಳ್ಳಲು ಆದ್ಯತೆ ನೀಡಿದ್ದಾಗಿ, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆಃ ಚಿಕ್ಕಮಗಳೂರಿನ ಬಾಳೆಹೊನ್ನೂರಿನಲ್ಲಿ, ಸಚಿವರು ಸುದ್ದಿಗಾರರೊಂದಿಗೆ ಮಾತನಾಡಿದರು. ರಾಜ್ಯದಲ್ಲಿ 6 ಸಾವಿರದ 800 ಆನೆಗಳಿವೆ. ದೇಶದಲ್ಲೇ ಅತಿ ಹೆಚ್ಚು ಆನೆಗಳಿರುವ ರಾಜ್ಯ ಕರ್ನಾಟಕ. ಆನೆ ಕಾರ್ಯಪಡೆ ಮುತುವರ್ಜಿಯಿಂದ ಕಾರ್ಯನಿರ್ವಹಿಸುತ್ತಿದೆ. ಹುಲಿಗಳ ಸಂಖ್ಯೆಯಲ್ಲಿಯೂ ರಾಜ್ಯ ದೇಶಕ್ಕೆ ಎರಡನೇ ಸ್ಥಾನದಲ್ಲಿದೆ. ಅರಣ್ಯ ಬೇಟೆ ತಡೆಯಲು ವಿಶೇ ’ ಘಟಕ ಆರಂಭಿಸಲಾಗಿದೆ ಎಂದರು.

<><><>

ಧಾರವಾಡದ, Rehabilitative Assistance for People in Distress – RAPID ಸಂಸ್ಥೆ, ವಿದ್ಯಾಗಿರಿಯ ಜೆ.ಎಸ್.ಎಸ್. ಸಂಸ್ಥೆಯ ಸಹಯೋಗದಲ್ಲಿ, ಮಹಿಳೆಯರಿಗಾಗಿಯೇ ಮೀಸಲಿದ್ದ, ಉದ್ಯೋಗ ಮೇಳ ಆಯೋಜಿಸಿ, ಗಮನ ಸೆಳೆದಿದೆ. ಧರ್ಮಸ್ಥಳದ ಧರ್ಮಾಧಿಕಾರಿ ಡಾಕ್ಟರ್ ಡಿ. ವೀರೇಂದ್ರ ಹೆಗ್ಗಡೆ ಅವರ ಆಶಯದಂತೆ, ಸ್ವಯಂ ಉದ್ಯೋಗ, ಸ್ವ ಸಹಾಯ ಗುಂಪುಗಳ ಪರಿಕಲ್ಪನೆ ಮೂಲಕ, ಸ್ತ್ರೀ ಸಬಲೀಕರಣಕ್ಕೆ ಒತ್ತು ನೀಡುವ ಉದ್ದೇಶದಿಂದ, ಕೌಶಲಯುತ ಮಹಿಳೆಯರಿಗೆ, ಉದ್ಯೋಗ ಮೇಳ ಆಯೋಜಿತವಾಗಿತ್ತು.

<><><>

ರಾಪಿಡ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಮಾಳವಿಕಾ ಕಡಕೋಳ ಪ್ರದೇಶ ಸಮಾಚಾರಕ್ಕಾಗಿ, ನಾಲ್ಕನೇ ಮಹಿಳಾ ಉದ್ಯೋಗ ಮೇಳದ ಮಾಹಿತಿ ನೀಡಿದ್ದಾರೆ.

<><><>

ರ್‍ಯಾಪಿಡ್ ಸಿ.ಇ.ಓ. ಮಾಳವಿಕಾ ಕಡಕೋಳ ಧ್ವನಿ 47 ಸೆಕೆಂದುಗಳು

<><><>

'ಸ್ಮಾರ್ಟ್ ಇಂಡಿಯಾ ಸಾಫ್ಟ್‌ವೇರ್ ಹಾಗೂ ಹಾರ್ಡ್‌ವೇರ್ ಹ್ಯಾಕಥಾನ್, ಒಟ್ಟು 72 ತಾಸುಗಳ ಮ್ಯಾರಾಥಾನ್ ಸ್ಪರ್ಧೆ ಯಶಸ್ವಿಯಾಗಿ, ಸಂಪನ್ನಗೊಂಡಿತು. ಆಧುನಿಕ ಡಿಜಿಟಲ್ ಜಗತ್ತಿನ ನೈಜ ಸಮಸ್ಯೆಗಳಿಗೆ, ಪ್ರಾಯೋಗಿಕ ಪರಿಹಾರ ಕಂಡುಕೊಳ್ಳಲು, ಕೇಂದ್ರ ಶಿಕ್ಷಣ ಸಚಿವಾಲಯ 36 ತಾಸುಗಳ ಎರಡು ವಿವಿಧ ಹ್ಯಾಕಥಾನ್ ಸ್ಪರ್ಧೆ ಆಯೋಜಿಸಿತ್ತು.

<><><>

ಹುಬ್ಬಳ್ಳಿಯ ಕೆ.ಎಲ್.ಇ. ತಾಂತ್ರಿಕ ಮತ್ತು ಅಭಿಯಾಂತ್ರಿಕ ಮಹಾವಿದ್ಯಾಲಯದ, ನೋಡಲ್ ಕೇಂದ್ರದಲ್ಲಿ, ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ – 2024, ಹಾರ್ಡ್‌ವೇರ್ ಸ್ಪರ್ಧೆಯಲ್ಲಿ, 30 ತಂಡಗಳಲ್ಲಿ, 150ಕ್ಕೂ ಹೆಚ್ಚು ಅಭಿಯಾಂತ್ರಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

<><><>

ಕೃಷಿ ಚಟುವಟಿಕೆ ಸಂಬಂಧಿ ಡ್ರೋಣ್ ಸಿದ್ಧಪಡಿಸಿದ, ವಿದ್ಯಾರ್ಥಿನಿ ವೇದಿಕಾ ಶೆಟ್ಟಿ, ತಮ್ಮ ತಂಡದ ಪರವಾಗಿ, ಪ್ರದೇಶ ಸಮಾಚಾರಕ್ಕಾಗಿ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ವೇದಿಕಾ ಶೆಟ್ಟಿ ಧ್ವನಿ 39 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ನ್ಯಾಯ ತೀರ್ಪುಗಳು ವಿವಾದ ರಹಿತವಾಗಿರಬೇಕು. ಆಗ ಮಾತ್ರ ಸಮಂಜಸ ನ್ಯಾಯ ತೀರ್ಮಾನ ಎನಿಸಿ, ಸರ್ವ ಸಮ್ಮತವಾಗುತ್ತವೆ ಎಂದು, ಭಾರತದ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಹೇಳಿದ್ದಾರೆ. ಮಂಗಳೂರಿನ ಎಸ್.ಡಿ.ಎಂ. ಕಾನೂನು ಮಹಾವಿದ್ಯಾಲದಲ್ಲಿ, ಯುವ ಕಾನೂನು ವಿದ್ಯಾರ್ಥಿಗಳನ್ನುದ್ದೇಶಿಸಿ, ಅವರು ಮಾತನಾಡಿದರು. ಧರ್ಮ ಮತ್ತು ನ್ಯಾಯದ ಮೂಲ ಸಿದ್ಧಾಂತಗಳು ಪರಸ್ಪರ ಪೂರಕವಾಗಿರಬೇಕು. ಸಂವಿಧಾನದ ಆಶಯದಂತೆ ಆಡಳಿತ ಇರಬೇಕು. ಧರ್ಮ ಮತ್ತು ತಂತ್ರಜ್ಞಾನ ಇದರಲ್ಲಿ ಹಾಸುಹೊಕ್ಕಾಗಿರಬೇಕು ಎಂದರು. ರಾಜ್ಯಸಭಾ ಸಂಸದ ಡಿ.ವೀರೇಂದ್ರ ಹೆಗ್ಗಡೆ ಮಾತನಾಡಿ, ವಕೀಲ ವೃತ್ತಿ ಶ್ರೇ ್ಠವಾದದ್ದು ಎಂದರು.

<><><>

ಬಳ್ಳಾರಿಯ ಸಂಗನಕಲ್ಲು ಪ್ರಾಗ್ ಐತಿಹಾಸಿಕ ಬೆಟ್ಟದ ಬಳಿಯ, ಪೂರ್ವ ದಿಕ್ಕಿನ ಜಮೀನಿನಲ್ಲಿದ್ದ, ಐದು ಸಾವಿರ ವರ್ಷಗಳ ಹಿಂದಿನದ್ದು ಎಂದು ಅಂದಾಜಿಸಲಾದ, ಬೂದಿಗುಡ್ಡ 'ಆಷ್ ಮೌಂಡ್'ನ್ನು, ನೆಲಸಮ ಮಾಡಲು ಸ್ಥಳೀಯರು ಮುಂದಾಗಿದ್ದಾರೆ. ಈ ಪ್ರದೇಶದಲ್ಲಿ ಈ ಮೊದಲು ಮೂರು ಬೂದಿ ಗುಡ್ಡಗಳು ಇದ್ದವು. ಅವುಗಳಲ್ಲಿ ಎರಡು ಈಗಾಗಲೇ ನಾಶವಾಗಿದ್ದು, ಈಗ ಒಂದು ಮಾತ್ರ ಉಳಿದಿತ್ತು ಎಂದು, ಅಂತಾರಾಷ್ಟ್ರೀಯ ಖ್ಯಾತಿಯ ಪುರಾತತ್ವಜ್ಞ ಧಾರವಾಡದ ಡಾಕ್ಟರ್ ರವಿ ಕೋರಿಶೆಟ್ಟರ್ ಆಕಾಶವಾಣಿಗೆ ತಿಳಿಸಿದ್ದಾರೆ. ಸಂಬಂಧಿತ ಎಲ್ಲ ಇಲಾಖೆಗಳ ಅಧಿಕಾರಿಗಳಿಗೆ ಈ ಬಗ್ಗೆ ಮಾಹಿತಿ ನೀಡಲಾಗಿದ್ದು, ಅಳಿದುಳಿದ ಬೂದಿ ಗುಡ್ಡವನ್ನು ಯಥಾ ಸ್ಥಿತಿ ಉಳಿಸಲು, ಕೋರಲಾಗಿದೆ ಎಂದು, ಅವರು ಹೇಳಿದರು.

<><><>

ಉತ್ತರಕನ್ನಡ ಜಿಲ್ಲೆ, ಶಿರಸಿ ತಾಲೂಕಿನ ಬೆಟ್ಟಕೊಪ್ಪದ, ವಿಶ್ವಶಾಂತಿ ಸೇವಾ ಟ್ರಸ್ಟ್ ಆಯೋಜಿಸುವ, 'ನಮ್ಮನೆ ಹಬ್ಬ' 13ನೇ ವರ್ಷಕ್ಕೆ ಪದಾರ್ಪಣೆ ಮಾಡಿದೆ. ಹಿರಿಯ ಪತ್ರಕರ್ತ ರವೀಂದ್ರ ಭಟ್ ಐನಕೈ ಅಧ್ಯಕ್ಷತೆಯ ಈ ಸಂಸ್ಥೆ, ಕಳೆದ 12 ವರ್ಷಗಳಿಂದ ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ಸಮಾಜಮುಖಿ ಚಟುವಟಿಕೆಗಳನ್ನು ಆಯೋಜಿಸುತ್ತ ಬಂದಿದೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹಿರಿಯ ಪತ್ರಕರ್ತ ರಾಘವೇಂದ್ರ ಬೆಟ್ಟಕೊಪ್ಪ.

<><><>

ರಾಘವೇಂದ್ರ ಬೆಟ್ಟಕೊಪ್ಪ ಧ್ವನಿ 49 ಸೆಕೆಂದುಗಳು

<><><>

ಬೆಳಗಾವಿ ಮರಾಠಾ ಲಘು ಪದಾತಿ ದಳದ, ಶಿವಾಜಿ ಮೈದಾನದಲ್ಲಿ ದಕ್ಷಿಣ ಭಾರತ ವಲಯದ, ವಿಶ್ರಾಂತ ಸೈನಿಕರ, ಕುಂದುಕೊರತೆ ಆಲಿಕೆ ಸಭೆ ಜರುಗಿತು. ಮರಾಠ ಲೈಟ್ ಇನ್‌ಫಂಟ್ರಿ ರೆಜಿಮೆಂಟಲ್ ಸೆಂಟರ್ ಕಮಾಂಡೆಂಟ್, ಬ್ರಿಗೇಡಿಯರ್ ಜೋಯ್‌ದೀಪ್ ಮುಖರ್ಜಿ ಸಭೆಗೆ ಚಾಲನೆ ನೀಡಿದರು. ವೀರ ನಾರಿಯರಿಗೆ ಗೌರವ ಸಮರ್ಪಿಸಲಾಯಿತು. 800ಕ್ಕೂ ಹೆಚ್ಚು ಸೈನಿಕರು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

<><><>

ಕರ್ನಾಟಕ ಟೇಬಲ್ ಟೆನ್ನಿಸ್ ಅಸೋಸಿಯೇ ನ್, ಬೆಂಗಳೂರಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ, ರಾಷ್ಟ್ರೀಯ ಶ್ರೇಯಾಂಕದ ಟೇಬಲ್ ಟೆನ್ನಿಸ್ ಚಾಂಪಿಯನ್‌ಶಿಪ್ ಪಂದ್ಯಾವಳಿ ಆಯೋಜಿಸಿದ್ದು, ಈ ತಿಂಗಳ 22ರ ವರೆಗೂ ನಡೆಯಲಿದೆ. ಕರ್ನಾಟಕ ಟೇಬಲ್ ಟೆನ್ನಿಸ್ ಅಸೋಸಿಯೇ ನ್ ಕಾರ್ಯದರ್ಶಿ ಕೆ.ಆರ್.ಮಂಜುನಾಥ ಮಾತನಾಡಿ, 11, 13, 15 ಹಾಗೂ 17 ವ ೯ ವಯೋಮಿತಿಯ ಬಾಲಕ, ಬಾಲಕಿಯರು, ಒಟ್ಟು 12 ವಿಭಾಗಗಳಲ್ಲಿ ಸ್ಪರ್ಧಿಸಲಿದ್ದಾರೆ ಎಂದರು. ಟಿ.ಜಿ.ಉಪಾಧ್ಯಾಯ ಹಾಗೂ ಶ್ರೀಧರನ್ ಶ್ರೀನಿವಾಸನ್ ಸ್ಪರ್ಧೆಯ ತೀರ್ಪುಗಾರರಾಗಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು

<><><>

ಮಡಿಕೇರಿಯ ಕೋಟೆ ಆವರಣದಲ್ಲಿ, ಪುತ್ತರಿ ಕೋಲಾಟ್‌ಗೆ, ಪಾಂಡೀರ ಕುಟುಂಬಸ್ಥರು ಚಾಲನೆ ನೀಡಿದರು.

<><><>

ಬೀದರ್ ನಲ್ಲಿ ಬಡ ಮಕ್ಕಳಿಗೆ ಉಚಿತ ಶಿಕ್ಷಣ ನೀಡುತ್ತಿರುವ, ಕಾಶಿನಾಥ ಚೆಲ್ವಾರರನ್ನು, ಸನ್ಮಾನಿಸಲಾಯಿತು.

<><><>

ಉಪ ಲೋಕಾಯುಕ್ತ, ನ್ಯಾಯಮೂರ್ತಿ ಫಣೀಂದ್ರ ಅವರು, ಶಿವಮೊಗ್ಗ ಜಿಲ್ಲೆಯಲ್ಲಿ ಒತ್ತುವರಿಯಾದ ಕೆರೆಗಳನ್ನು ತೆರವುಗೊಳಿಸಲು ಸೂಚಿಸಿದ್ದಾರೆ.

<><><>

ಮಂಡ್ಯದಲ್ಲಿ ಆಯೋಜಿತ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ದಿನಗಣನೆ ಆರಂಭವಾಗಿದ್ದು, ಪೂರ್ವ ಸಿದ್ಧತೆಗಳು ಭರದಿಂದ ಸಾಗಿವೆ.

<><><>

ಉಕ್ಕಿನ ಮನುಷ್ಯ ಸರ್ದಾರ ವಲ್ಲಭಭಾಯಿ ಪಟೇಲ ಅವರ ಪುಣ್ಯತಿಥಿ ಹಿನ್ನೆಲೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಗೌರವ ನಮನ ಸಲ್ಲಿಸಿದರು.

<><><>

ಲೋಕಸಭೆಯಲ್ಲಿ ಇಂದು, 'ಒಂದು ರಾಷ್ಟ್ರ, ಒಂದು ಚುನಾವಣೆ'ಗೆ ಸಂಬಂಧಿಸಿದ, ಎರಡು ಮಸೂದೆಗಳು, ಮಂಡನೆಯಾಗಲಿವೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು

<><><>

- ಬೆಳಗಾವಿ ಚಳಿಗಾಲದ ಅಧಿವೇಶನ: ಉಭಯ ಸದನಗಳಲ್ಲಿ, ಇಂದಿನಿಂದ ಮೂರು ದಿನ, ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ, ಚರ್ಚೆ.
- ರಾಜ್ಯದಲ್ಲಿ ಮಾನವ ಮತ್ತು ವನ್ಯಜೀವಿ ಸಂಘ ´ಕ್ಕೆ, ಪರಿಹಾರ ಕಂಡುಕೊಳ್ಳಲು, ಅರಣ್ಯ ಇಲಾಖೆ, ಆದ್ಯತೆ.
- ನ್ಯಾಯ ತೀರ್ಪುಗಳು, ವಿವಾದ ರಹಿತ ಮತ್ತು ಸರ್ವ ಸಮ್ಮತವಾಗಿರಬೇಕು – ಆರ್.ವೆಂಕಟರಮಣಿ.
- ಬಳ್ಳಾರಿಯ, ಸಂಗನಕಲ್ಲು ಪ್ರಾಗ್ ಐತಿಹಾಸಿಕ ಬೆಟ್ಟದ, ಐದು ಸಾವಿರ ವರ್ಷಗಳ ಬೂದಿ ಗುಡ್ಡ ಉಳಿಸಲು, ತಜ್ಞರ ಮನವಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>

**ಹರ್ಷ**